(ಶ್ರೀ ಎ. ಜಿ. ರಾಮಚಂದ್ರರಾವ್.)

ಇನ್ನೊಂದು ಸಲಹೆಕೊಟ್ಟರು. ಗ್ರ್ಯಾಂಟನ್ನು easy instalment ಗಳಲ್ಲಿ ಕೊಡಲು ಅವಕಾಶ ಮಾಡಬೇಕು ಎಂದು ಹೇಳಿರುವುದನ್ನು ಪರಿಶೀಲಿಸಿ ಅದರಲ್ಲಿರುವ ತೊಂದರೆ ನಿವಾರಣೆ ಮಾಡುತ್ತೇವೆ. ಈ ಭರವಸೆಯ ಮೇಲೆ ನೂಚಕರು ತಮ್ಮ ಖೋತಾ ನೂಚನೆಯನ್ನು ವಾಪಸು ತೆಗೆದುಕೊಳ್ಳುವರೆಂದು ನಂಬುತ್ತೇನೆ.

Sri S. SRINIVASA IYENGAR.—I seek leave to withdraw my cut motion.

The cut motion was, by leave, withdrawn.

Buildings for Boys and Adikarnataka Schools at Malavalli

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).—ಸ್ವಾಮಿ, ನನ್ನ ಖೋತಾ ನೂಚನೆ ಈ ರೀತಿಯಿದೆ; ಅದನ್ನು ಮಂಡಿಸುತ್ತೇನೆ:

"'37. ವಿದ್ಯಾಭ್ಯಾಸ' ಎಂಬ ಬಾಬಿನಲ್ಲಿ ಕೋರಿರ ತಕ್ಕ 3,77,90,000 ರೂಪಾಯಿಗಳ ಡಿಮ್ಯಾಂಡ್ ಮನವಿಯ ಸಂಬಂಧದಲ್ಲಿ, 100 ರೂಪಾಯಿಗಳನ್ನು ಕಡಮೆ ಮಾಡಬೇಕು. (ಮಳವಳ್ಳಿ ಟೌನಿನಲ್ಲಿ ಸರ್ಕಾರಿ ಬಾಲಕರ ಮಿಡ್ಲ್ ಸ್ಕೂಲಿನ ಮತ್ತು ಆದಿಕರ್ಣಾಟಕರ ಮಿಡ್ಲ್ ಸ್ಕೂಲಿನ ಕಟ್ಟಡಗಳನ್ನು ಕಟ್ಟುವ ವಿಚಾರದಲ್ಲಿ ಚರ್ಚೆ ನಡೆಯುವಂತೆ ಮಾಡುವುದಕ್ಕಾಗಿ)."

ಈ ಖೋತಾ ನಿರ್ಣಯದಲ್ಲಿ ನಮೂದಾಗಿರುವ ಎರಡು ಶಾಲಾ ಕಟ್ಟಡಗಳ ಬಗ್ಗೆ ಅದರಲ್ಲೂ ಬಾಲಕರ ಮಿಡ್ಲ್ ಸ್ಕೂಲು ಕಟ್ಟಡಕ್ಕೆ ನುಮಾರು ಎರಡು ವರ್ಷಗಳ ಹಿಂದೆ 57 ಸಾವಿರ ರೂಪಾಯಿಗಳ ಗ್ರ್ಯಾಂಟನ್ನು ಸರ್ಕಾರ ಕೊಟ್ಟು ಕಟ್ಟಡ ಪ್ರಾರಂಭಿಸಬೇಕೆಂದು ಸರ್ಕಾರ ಮತ್ತು ಇಂಜನಿಯರಿಂಗ್ ಇಲಾಖೆ ಕೂಡ ತೀರ್ಮಾನ ಕೊಟ್ಟರು. ಆದರೆ ಕಟ್ಟಡ ಪ್ರಾರಂಭ ಮಾಡಬೇಕೆನ್ನು ವಾಗಲೇ ಯಾವ ಕಾರಣಕ್ಕೋ ಯಾರ ಅರ್ಜಿಯ ಮೇಲೋ ಸರ್ಕಾರದಿಂದ ತಡೆ ಆರ್ಡರು ಬಂತು. ಆ ಮೇಲೆ ಸಂಬಂಧಪಟ್ಟ ವಿದ್ಯಾ ಇಲಾಖೆ ಡೈರೆಕ್ಟರ್‌ರವರು ಅದನ್ನು ಖುದ್ದಾಗಿ ನೋಡಿ ಸ್ಥಳ ಪರೀಕ್ಷೆಮಾಡಿ ವರದಿ ಕಳುಹಿಸಿದಮೇಲೆ ಈ ವಿಷಯ ತೀರ್ಮಾನವಾಗದೆ ಮತ್ತೊಂದುಸಲ ವಿದ್ಯಾನಧಿವರೇ ಸ್ಥಳಕ್ಕೆ ಖುದ್ದಾಗಿ ಬಂದು ಅಜಮಾಯಿಷಿ ಮಾಡಿ ನುಮಾರು 6 ತಿಂಗಳ ಮೇಲಾಗಿದೆ. ಇಷ್ಟು ದಿವಸಗಳಾದರೂ ಕೂಡ ನುಮಾರು ಎರಡು ಬಡ್ಡೆಟ್ ಕಳೆದರೂ ಕೂಡ ಈ ಕಟ್ಟಡಗಳ ನಿರ್ಮಾಣವಾಗಲಿಲ್ಲ. ಬಡ್ಡೆಟ್ಟಿನಲ್ಲಿ ಮಾತ್ರ ಅಂಕಿ ಅಂಶಗಳಿದೆ, ಪ್ರತಿಸಲವೂ ನಮೂದಿಸಿದಂತೆ ಈ ಸಾರಿಯೂ 52 ಸಾವಿರ ರೂಪಾಯಿಗಳನ್ನು ಬ್ರಾಕೆಟ್ಟಿನಲ್ಲಿ ತೋರಿಸಿದ್ದಾರೆ. ಆದರೆ ಅದರ ಅರ್ಥ ಗೊತ್ತಾಗಲಿಲ್ಲ. ಇದು ಗ್ರ್ಯಾಂಟಲ್ಲವೆ? ಸಾರ್ವಜನಿಕರು ಹತ್ತಾರು ವರ್ಷಗಳಿಂದ ಈ ಸ್ಕೂಲು ಕಟ್ಟಡ ಸಾಲುವುದಿಲ್ಲ, ಹೊಸ ಕಟ್ಟಡ ಆಗಬೇಕು ಎಂದು ಹೇಳುತ್ತಿದ್ದು, ಮಳವಳ್ಳಿ ತಾಲ್ಲೂಕಿನವರು ಪ್ರಜಾ ಸರ್ಕಾರದಲ್ಲಿ ಹೊಡೆದಾಡಿದ್ದರ ಫಲವಾಗಿ ಈಗ ಎರಡು ವರ್ಷಗಳ ಹಿಂದೆ ಈ ಕೆಲಸ ಈಡೇರಿತೆನ್ನುವಾಗ, ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವೆಂದು ಹೇಳುವಂತೆ, ಸರ್ಕಾರ ಹಣ ಕೊಟ್ಟರೂ ಯಾವುದೋ ಅರ್ಜಿ ಬಂದು ತಡೆ ಆರ್ಡರು ಬಂತು. ಹೀಗಾಗಿ ಕಟ್ಟಡ ಕಟ್ಟುವುದು ಇಷ್ಟು ನಿಧಾನವಾದರೆ ಪ್ರಜೆ ಏನು ಮಾಡಬೇಕು? ಸರ್ಕಾರ ಈ ರೀತಿ ಇದರ ವಿಷಯದಲ್ಲಿ ನಡೆದಹಾಗೆ ನಡೆದರೆ ಹೇಗೆ? ಬೇಗ ಬೇಗ ಕೆಲಸಗಳು ನಡೆಯಬೇಕು. ಇದೂಅಲ್ಲದೆ ಕಟ್ಟಡಗಳ ವಿಷಯದಲ್ಲಿ ಇಷ್ಟು ನಿಧಾನವಾದರೆ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಒಂದುಸಾರಿ ಎಸ್ಟಿಮೇಟ್ ಮಾಡಿ ಒಂದು ವರ್ಷ ತಡವಾದರೆ ಅನಂತರ ಬೆಲೆಗಳ ವ್ಯತ್ಯಾಸದಿಂದ ಶೇಕಡ 20—30 ರಷ್ಟು ಎಸ್ಟಿಮೇಟ್ ಹೆಚ್ಚಾಗುವುದನ್ನು ನಾವು ನೋಡುತ್ತಿದ್ದೇವೆ. ಹಾಗಿರುವಾಗ 57 ಸಾವಿರ ರೂಪಾಯಿಗಳನ್ನೊದಗಿಸಿರುವ ಕಟ್ಟಡದ ಕೆಲಸ ಒಂದು ಅರ್ಜಿಯಮೇಲೆ 2 ವರ್ಷಗಳು ನಿಧಾನವಾದರೆ ಕಟ್ಟಡವನ್ನು ಪುನಃ ಕಟ್ಟುವುದಕ್ಕೆ ಪ್ರಾರಂಭ ಮಾಡುವುದರೊಳಗಾಗಿ ಇನ್ನೂ ಹೆಚ್ಚು ಮೊಬಲಗು ಬೇಕಾಗುವಂತೆ ರಿವೈಸ್ಡ್ ಎಸ್ಟಿಮೇಟ್ ಮಾಡಿದರೆ ಸರ್ಕಾರದವರು ಅದನ್ನು ನಿಜವಾಗಿಯೂ ಪೂರೈಸುತ್ತಾರೋ ಅಥವಾ ಹಣ ಸಾಲುವುದಿಲ್ಲವೆಂದು ಹೇಳುತ್ತಾರೋ ಎಂಬ ಭಯ ಕೂಡ ಇದೆ. ಸಾಲದ್ದಕ್ಕೆ ಪ್ರತಿ ಸಾರಿಯೂ ಬಡ್ಜೆಟ್ಟಿನಲ್ಲಿ ಖೋತಾದೊಡ್ಡದಾಗಿ ನಮುದ್ರವಾಗುತ್ತಿರುವಾಗ, ಅನೇಕ ಬಾಬುಗಳಿಗೆ ಹಣವಿಲ್ಲದಿರುವಾಗ ಈ ಕಟ್ಟಡದ ವೆಚ್ಚಕ್ಕೆ, ಹಣ ಸಿಕ್ಕುತ್ತದೆಯೇ ಎಂಬುದನ್ನು ನೋಡಬೇಕು. ಈ ವಿಚಾರದಲ್ಲಿ ಪ್ರಶ್ನೆನಹ ಕಳುಹಿಸಿತ್ತು, ಜವಾಬು ಇನ್ನೂ ಬಂದಿಲ್ಲ, ನಿರೀಕ್ಷೆ ಮಾಡಬೇಕಾಗಿದೆ.

ಆದಿಕರ್ಣಾಟಕರ ಮಿಡ್ಲ್ ಸ್ಕೂಲಿನ ಸಂಬಂಧದಲ್ಲೂ ಕೂಡ 26 ಸಾವಿರ ರೂಪಾಯಿಗಳ ಒಂದು ಗ್ರ್ಯಾಂಟನ್ನು ಸರ್ಕಾರದವರು ಕೊಟ್ಟಿದ್ದಾರೆ. 57 ಸಾವಿರ ರೂಪಾಯಿಗಳನ್ನು ಕೊಟ್ಟಿರುವ ಕಟ್ಟಡವನ್ನು ಎರಡು ವರ್ಷಗಳಿಂದ ತಡೆದಿದ್ದರೂ 26 ಸಾವಿರ ರೂಪಾಯಿಗಳ ಕಟ್ಟಡದ ಕೆಲಸ ಇದ್ದಕ್ಕಿದ್ದಹಾಗೆ ಅಕಸ್ಮಾತ್ ಪ್ರಾರಂಭವಾಗಿ, ಅದನ್ನು ಕಟ್ಟುವ ಜಾಗವನ್ನು ಆಕ್ಟೈರ್ ಮಾಡದೆ ಇರುವಾಗ, ಆದಿಕರ್ಣಾಟಕ ಜನರ ಒಂದು ಗ್ರಾಮದ ಬಡಾವಣೆಗಾಗಿ ಮೀಸಲಾಗಿದ್ದ ಜಾಗದಲ್ಲಿ ಆ ಕಟ್ಟಡ ಪ್ರಾರಂಭವಾಗಿ ಅವರ ಒಂದು ಕೊರಿಕೆ ಮೇಲೆ ಸರ್ಕಾರ ಅದನ್ನು ನಿಲ್ಲಿಸಬೇಕೆಂದು ಹೇಳಿದರು. ಈ ಎರಡು ಕಟ್ಟಡಗಳ ವಿಷಯವನ್ನೂ ಒಟ್ಟಿಗೆ ಪರಿಶೀಲಿಸಿ ಜಾಗ್ರತೆ ಕಟ್ಟುವುದಕ್ಕೆ ಪ್ರಾರಂಭಿಸುತ್ತೇವೆಂದು ನಚಿವರು ಭರವಸೆ ಕೊಟ್ಟಿದ್ದಾರೆ. ಆದರೆ ತಡೆ ಆರ್ಡರು ಏನಾಗಿದೆ, ಕಟ್ಟಡ ಪ್ರಾರಂಭಿಸುವುದು ಯಾವಾಗ ಎಂಬ ಬಗ್ಗೆ ನಿರ್ದಿಷ್ಟವಾದ ಉತ್ತರ ಬಂದಿಲ್ಲ. ಈ ರೀತಿಯಾಗಿ ತಡಮಾಡುವುದರಿಂದ ಜನರಿಗೂ ಕ್ಷೇಮವಿಲ್ಲ; ಸರ್ಕಾರಕ್ಕೂ ಒಳ್ಳೆಯ ಹೆಸರಿಲ್ಲ. ಆದ್ದರಿಂದ ಈಗಲಾದರೂ ಯೋಚನೆಮಾಡಿ ಸರ್ಕಾರದವರು ಬೇಗ ಬಡ್ಜೆಟ್ಟಿನಲ್ಲಿ ಒದಗಿಸಿರುವ ಹಣ ಈ ವರ್ಷವೇ ಖರ್ಚಾಗಿ ಮಳವಳ್ಳಿ ತಾಲ್ಲೂಕು ಪ್ರಜೆಗಳಿಗೆ ಸೌಲಭ್ಯ ದೊರಕುವ ಹಾಗೆ ಮಾಡುತ್ತಾರೆಂದು ನಂಬಿ ಈ ಖೋತಾ ನೂಚನೆಯನ್ನು ಮಂಡಿಸುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

*ಶ್ರೀ ಎ. ಜಿ. ರಾಮಚಂದ್ರರಾವ್.—ಸ್ವಾಮಿ, ಈ ವಿಚಾರವಲ್ಲ ವಿಳಂಬವಾಗಿರುವುದಕ್ಕೆ ಕಾರಣವೇನು ಎಂಬುದು ಸದಸ್ಯರಿಗೆ ಗೊತ್ತು. ಸ್ವೆಟು ವಿಚಾರದಲ್ಲಿ ಭಿನ್ನಾಭಿಪ್ರಾಯ ಬಂದು ಈ ವಿಚಾರದಲ್ಲಿ ಯಾವ

ನಿರ್ಧಾರಕ್ಕೂ ಬಾರದೇ ಹಾಗೇ ಉಳಿದಿದೆ. ಈಗಾಗಲೆ ಆದಿಕರ್ಣಾಟಕರ ಮಿಡ್ಲ್ ಸ್ಕೂಲ್ ಪ್ರಾರಂಭಿಸ ಬೇಕೆಂದು 26 ಸಾವಿರ ರೂಪಾಯಿಗಳನ್ನೂ, ಇನ್ನೊಂದು ಮಿಡ್ಲ್ ಸ್ಕೂಲ್‌ಗಾಗಿ 57 ಸಾವಿರ ರೂಪಾಯಿಗಳನ್ನೂ ಒದಗಿಸಲಾಗಿದೆ. ಆದಷ್ಟು ಜಾಗ್ರತೆಯಾಗಿ ಈ ಬಗ್ಗೆ ಇರುವ ಭಿನ್ನಾಭಿಪ್ರಾಯ ವನ್ನು ನಿರಿಪಡಿಸಿ ಸೂಕ್ತ ಕಾರ್ಯಕ್ರಮ ಕೈಗೊಳ್ಳು ತ್ತೇವೆಂದು ಭರವಸೆ ಕೊಡುತ್ತೇನೆ,

Sri B. P. NAGARAJA MURTHY.—I seek leave to withdraw the cut motion.

The cut motion was, by leave, withdrawn.

Mr. SPEAKER.—Sri V. Venkatappa was very keen in moving one of his cut motions. If the House has no objection, I will take up his cut motion, because there are only 10 minutes more. The cut motions are Nos. 61 and 62 and he can move one of them.

Sri S. GOPALA GOWDA (Sagar—Hosanagar).—What about educational reforms ?

Mr. SPEAKER.—I do not know.

Deplorable condition of School Buildings in Channapatna Taluk.

Sri V. VENKATAPPA (Channapatna).—Sir, I beg to move:

> "That the demand under the head '37. Education' for Rs. 3,77,90,000 be reduced by Rs. 100 (to raise a debate on the deplorable condition of some school buildings in Channapatna Taluk)."

ಸ್ವಾಮಿ, ಈ ತಾಲ್ಲೂಕಿನ ಕೆಲವು ಸ್ಕೂಲು ಕಟ್ಟಡ ಗಳು ಬಹಳ ಹೀನಸ್ಥಿತಿಯಲ್ಲಿರುವುದನ್ನು ಮಾನ್ಯ ರೆವೆನ್ಯೂ ಸಚಿವರು ಸಹ ನೋಡಿ ಆ ಬಗ್ಗೆ ಪಬ್ಲಿಕ್ ವರ್ಕ್ಸ್ ಇಲಾಖೆಯವರಿಗೂ ಸಹ ಈ ಕಟ್ಟಡಗಳ ರಿಪೇರಿ ಬಗ್ಗೆ ಅಂದಾಜು ತಯಾರಿಸಿ ಕಳುಹಿಸ ಬೇಕೆಂದು ಹೇಳಿ ದ್ದಾರೆ. ಹಿಂದೆ ಕಟ್ಟಿದ್ದ ಕೆಲವು ಸ್ಕೂಲ್ ಕಟ್ಟಡಗಳನ್ನು ಮಿಲಿಟರಿಯವರು ಬಿಟ್ಟುಹೋದ ಹಳೆಯ ಸಾಮಾನುಗ ಳಿಂದ ಕಟ್ಟಿರುತ್ತಾರೆ. ಅದರ ಕಾರಣ ಈ ಕಟ್ಟಡಗಳು ಅಲ್ಲಲ್ಲಿ ಬಿರುಕುಬಿಟ್ಟಿವೆ. ಭಾವಣಿಗಳು ಮುರಿದು ಹೋಗಿ ಇಂಥ ಹೀನಸ್ಥಿತಿಯಲ್ಲಿರುವ ಕಟ್ಟಡಗಳನ್ನು ರೆವೆನ್ಯೂ ಸಚಿವರು ಖುದ್ದಾಗಿ ನೋಡಿಕೊಂಡು ಬಂದು ಅವುಗಳ ರಿಪೇರಿ ಬಗ್ಗೆ ಜಾಗ್ರತೆ ಅಂದಾಜು ತಯಾರು ಮಾಡಿ ಕಳುಹಿಸಿ ಎಂದು ಹೇಳಿದರೂ ನಿಧಾನವಾಗಿರು ವುದಕ್ಕೆ ಕಾರಣವೇನೆಂಬುದು ಅರ್ಥವಾಗುವುದಿಲ್ಲ. ಇಂಥ ಸ್ಕೂಲುಗಳು ಚನ್ನಪಟ್ಟಣ ತಾಲ್ಲೂಕಿನಲ್ಲಿ 8-10 ಇವೆ. ಆದಷ್ಟು ಜಾಗ್ರತೆ ಈ ವಿಚಾರದಲ್ಲಿ ಸರ್ಕಾರ ದವರು ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ತಿಳಿ ಸುವುದೇ ಈ ಜೋತಾ ಸೂಚನೆಯ ಉದ್ದೇಶ.

Mr. SPEAKER.—Cut motion moved:

> "That the demand be reduced by Rs. 100."

*ಶ್ರೀ ಎ. ಜಿ. ರಾಮಚಂದ್ರರಾವ್.—ಇದನ್ನು ಪರಿ ಶೀಲನೆ ಮಾಡುತ್ತೇನೆ. ಈ ವಿಚಾರದಲ್ಲಿ ರೆವೆನ್ಯೂ ಸಚಿವರು ಸಹ ಎರಡು ಕಟ್ಟಡಗಳ ಬಗ್ಗೆ ಪಬ್ಲಿಕ್ ವರ್ಕ್ಸ್ ಇಲಾಖೆಯವರಿಗೆ ತಿಳಿವಳಿಕೆ ಕೊಟ್ಟಿರುವುದು ವಾಸ್ತವ. ಆದಷ್ಟು ಮಟ್ಟಿಗೆ ಇದನ್ನು ತ್ವರಿತಗೊಳಿಸುವ ಕಾರ್ಯ ಕ್ರಮ ಕೈಗೊಳ್ಳುತ್ತೇನೆ.

Sri V. VENKATAPPA.—I seek leave to withdraw the cut motion.

The cut motion was, by leave, withdrawn.

Appointment of a Judge of High Court to enquire into Mysore University affairs.

Sri Mulka GOVINDA REDDY (Chitaldrug).—Sir, I beg to move:

> "That the demand under the head '37. Education' for Rs. 3,77,90,000 be reduced by Rs. 100 (to urge the necessity of instituting an enquiry by a Judge of the High Court into the affairs of the University of Mysore)."

We are all aware of certain affairs of the Mysore University. Complaints have been received time and again regarding the admission of students to different colleges, especially to technical and professional colleges. Time and again complaints have been received that late admissions are mainly responsible for the failures in examinations. The percentage of failures in the examinations is increasing year after year and the teaching in the University has gone down deplorably. The way in which the University is being administered, we all know, is not at all satisfactory. The distribution of scholarships, disbursement of scholarships, the private tuition that is allowed to some of the teachers in the University, all have led to many things which are really deplorable. Again, the appointment of examiners, correction of papers, the leakage of question papers, all these things do require serious consideration at the hands of the University. It is no use spending